ಒಂದುಬಾರಿ, ಒಂದೇ ಒಂದು ಬಾರಿ ಚೀರಿಕೊಂಡ. ಕ್ಷಣಾರ್ಧದಲ್ಲಿ ನಾನು ಅವನನ್ನು ನೆಲಕ್ಕೆ ಕೆಡವಿ ಅವನ ದಪ್ಪನೆಯ ಹಾಸಿಗೆಯನ್ನು ಅವನ ಮೇಲೆ ಕವುಚಿ ಹಾಕಿದೆ. ಈವರೆಗಿನ ನನ್ನ ಸಾಧನೆಯನ್ನು ನೆನೆದು ಮುಗುಳ್ನಕ್ಕೆ. ಆದರೂ ಬಹಳ ಹೊತ್ತು ಮುದುಕನ ಹೃದಯ ಹಾಸಿಗೆಯೊಳಗಿನಿಂದ 'ಟಿಕ್ ಟಕ್ ಟಿಕ್ ಟಕ್' ಎಂದು ಬಡಿದುಕೊಳ್ಳುತ್ತಲೇ ಇತ್ತು. ಇದು ನನ್ನನ್ನು ಅಷ್ಟೊಂದು ಕಂಗೆಡಿಸಲಿಲ್ಲ. ಅದು ಗೋಡೆಗಳಿಂದಾಚೆಗೆ ಕೇಳಿಸುವುದು ಸಾಧ್ಯವಿರಲಿಲ್ಲ. ಕೊನೆಗೂ ಮುದುಕನ ಹೃದಯ ಬಡಿದುಕೊಳ್ಳುವುದನ್ನು ನಿಲ್ಲಿಸಿತು. ಮುದುಕ ಸತ್ತು ಹೋದನೆಂಬುದರಲ್ಲಿ ಸಂಶಯವಿರಲಿಲ್ಲ. ಹಾಸಿಗೆಯನ್ನು ಪಕ್ಕಕ್ಕೆ ಸರಿಸಿ ನಾನು ಮುದುಕನ ದೇಹವನ್ನೊಮ್ಮೆ ಪರೀಕ್ಷಿಸಿದೆ. ಅವನು ಸತ್ತಿದ್ದನೆಂಬುದರಲ್ಲಿ ಸಂಶಯವಿರಲಿಲ್ಲ. ನಾನು ಅವನ ಎದೆಯ ಮೇಲೆ ಕೈಯಿಟ್ಟು ತುಂಬಾ ಹೊತ್ತು ಗಮನಿಸಿದೆ. ಅವನ ಹೃದಯ ನಿಶ್ಚಲವಾಗಿತ್ತು. ಮುದುಕ ಸತ್ತು ಹೋಗಿದ್ದ. ಅವನ ನೀಲಿ ಕಣ್ಣು ನನ್ನನ್ನು ಮತ್ತೆಂದಿಗೂ ಕಾಡಲಾರದು.

ನೀವು ನನ್ನನ್ನು ಮತ್ತೂ ಹುಚ್ಚ ಎನ್ನುವುದಾದರೆ, ಮುದುಕನ ಹೆಣವನ್ನು ಮುಚ್ಚಿಡಲು ನಾನು ತೆಗೆದುಕೊಂಡ ಕ್ರಮಗಳ ಬಗ್ಗೆ ಕೇಳಿಸಿಕೊಂಡರೆ ಖಂಡಿತವಾಗಿಯೂ ನಿಮ್ಮ ಅಭಿಪ್ರಾಯಗಳನ್ನು ಬದಲಾಯಿಸಿಕೊಳ್ಳುತ್ತೀರ. ಆ ರಾತ್ರಿ ಸರಿಯುತ್ತಿದ್ದಂತೆಯೇ ನಾನು ಹೆಚ್ಚೆಚ್ಚು ಕಾರ್ಯಪ್ರವೃತ್ತನಾದೆ. ಮೊದಲನೆಯದಾಗಿ ಮುದುಕನ ಶವವನ್ನು ತುಂಡರಿಸಿದೆ – ರುಂಡ, ಮುಂಡ, ಕೈ ಕಾಲು ಇತ್ಯಾದಿ...

ನಂತರ, ನೆಲಹಾಸುಗೆಗೆ ಬಳಸಿದ್ದ ಮೂರು ಮರದ ಹಲಗೆಗಳನ್ನು ಎಬ್ಬಿಸಿದೆ. ಅವುಗಳನ್ನು ಎರಡು ತೊಲೆಗಳ ಮಧ್ಯೆ ಕೂರಿಸಿದ್ದರು. ತೊಲೆಗಳ ಮತ್ತು ಹಲಗೆಗಳ ಮಧ್ಯೆ ಇದ್ದ ಖಾಲಿ ಜಾಗದಲ್ಲಿ ನೀಲಿ ಕಣ್ಣಿನ ಮುದುಕನ ಛೇದಿಸಿದ ಅಂಗಾಂಗಗಳನ್ನು ತುರುಕಿ ಎಷ್ಟು ಚೆನ್ನಾಗಿ ಮತ್ತೆ ಮುಚ್ಚಿದೆನೆಂದರೆ, ಬೇರೆಯವರಿರಲಿ, ಸ್ವತಃ ಮುದುಕ ಕೂಡ ತನ್ನ ಆ ನೀಲಿ ವಿಲಕ್ಷಣ ಕಣ್ಣಿನಿಂದ ಪತ್ತೆ ಹಚ್ಚಲು ಸಾಧ್ಯವಿರಲಿಲ್ಲ. ಈ ಬಗ್ಗೆ ನಾನು ತುಂಬಾ ಜಾಗರೂಕನಾಗಿದ್ದೆ.

ಇಷ್ಟೆಲ್ಲಾ ಮುಗಿಸಿದಾಗ ಗಂಟೆ ಬೆಳಗಿನ ಜಾವ ನಾಲಕ್ಕಾಗಿತ್ತು. ಆದರೂ ಹೊರಗೆ ದಟ್ಟ ಕತ್ತಲು ಆವರಿಸಿತ್ತು. ಸ್ವಲ್ಪ ಹೊತ್ತಿನಲ್ಲೆ ಮುಂಬಾಗಿಲ ಘಂಟೆ ಸದ್ದು ಮಾಡತೊಡಗಿತು. ನಾನು ಕಿಂಚಿತ್ತೂ ಅಳುಕದೆ ಎದ್ದು ಬಾಗಿಲನ್ನು ತೆರೆದೆ. ಮೂವರು, ತಾವೆಲ್ಲಾ ಪೊಲೀಸರೆಂದು ಒಳಗೆ ಬಂದರು. ನೆರೆ ಹೊರೆಯವರಲ್ಲಿ ಯಾರೋ ಒಬ್ಬರು ಮುದುಕನ ಮನೆಯಿಂದ ಯಾರೋ ನೋವಿನಿಂದ ಚೀರಿದ ದನಿ ಕೇಳಿಸಿತ್ತು ಎಂದು ದೂರು ಕೊಟ್ಟಿದ್ದರು. ಅದನ್ನು ಪರಾಮರ್ಶಿಸಲು ತಾವು ಬಂದಿದ್ದಾಗಿ ಅವರು ಹೇಳಿದರು. ನಾನು ಅವರನ್ನು ಸೌಜನ್ಯದಿಂದ ಒಳಗೆ ಬರಮಾಡಿಕೊಂಡೆ. ಚೀರಿದ ದನಿ ನನ್ನದೇ, ಒಂದು ಕೆಟ್ಟ ಕನಸು ಎಂದು ಮುಗುಳ್ನಕ್ಕೆ. ನನಗೇಕೆ ಹೆದರಿಕೆ? ಮುದುಕ, ಊರಿಗೆ ಹೋಗಿದ್ದಾನೆಂದು ಹೇಳಿದೆ. ಮುದುಕನ ಬೆಡ್ ರೂಮ್ ಅಷ್ಟೇ ಅಲ್ಲ, ಅವರನ್ನು ಮನೆಯೊಳಗೆಲ್ಲಾ ಸುತ್ತಾಡಿಸಿ ತೋರಿಸಿ, ಅವರು ಎಲ್ಲಾ ಕಡೆಗಳಲ್ಲೂ ಹುಡುಕುವಂತೆ ಮಾಡಿದೆ. ನನಗೆ ನನ್ನ ಬಗ್ಗೆ ಎಷ್ಟೊಂದು ಆತ್ಮವಿಶ್ವಾಸ ಇತ್ತೆಂದರೆ, ಅವರಿಗೆಲ್ಲಾ ಮುದುಕನ ಬೆಡ್‌ರೂಮಿನೊಳಗೇ ಕುಳಿತುಕೊಳ್ಳಲು ಕುರ್ಚಿಗಳನ್ನು ಹಾಕಿ, ನಾನು, ನೀವು ನಂಬುತ್ತೀರೋ ಇಲ್ಲವೋ, ಮುದುಕನ ಶವವಿದ್ದ ಜಾಗದ ಮೇಲೆಯೇ ಕುರ್ಚಿ ಹಾಕಿ ಕುಳಿತುಕೊಂಡೆ. ಅವರ ಪ್ರಶ್ನೆಗಳಿಗೆಲ್ಲಾ ಉತ್ತರಿಸಿದ ಮೇಲೆ ಪೊಲೀಸರಿಗೆ ತೃಪ್ತಿಯಾದಂತಿತ್ತು. ನಾನೂ ಕೂಡ ಆರಾಮವಾದೆ. ನಾವು ಲೋಕಾಭಿರಾಮವಾಗಿ ಹರಟುತ್ತಾ ಕುಳಿತುಕೊಂಡಿದ್ದೆವು, ಸಮಯ ಕಳೆದಂತೆಲ್ಲಾ, ಇವರೆಲ್ಲಾ ಯಾವಾಗ ಇಲ್ಲಿಂದ ತೊಲಗುತ್ತಾರೋ ಎಂಬ ಅಸಹನೆ ನನ್ನೊಳಗೆ ಕುದಿಯತೊಡಗಿತು. ನನ್ನ ತಲೆ ಚಿಟ್ಟು ಹಿಡಿಯತೊಡಗಿ ಕಿವಿಗಳೊಳಗೆ ಎಂತಾದೋ ಸದ್ದು ಕೇಳಿಸತೊಡಗಿತು. ಆದರೆ ಅವರು ಎದ್ದು ಹೋಗುವ ಲಕ್ಷಣಗಳೇ ಕಾಣುತ್ತಿರಲಿಲ್ಲ. ಅವರು ಆರಾಮವಾಗಿ ನಗೆಯಾಡುತ್ತಾ ಏನೇನೋ ಹರಟುತ್ತಿದ್ದರು.